ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಇವರು ಏನೋ ಜೀವಂತವಾಗಿ ಉಳಿದುಕೊಂಡಿದ್ದಾರೆ. ಆವಕ್ಕೋನ್ಕರ ವಾಮಿಟೆಡ್ ಮ್ಯಾಟರ್ ಮತ್ತು ಸೊ್ವಮಾಕ್ ವಾಷನ್ನು ಕೆಮಿಕರ್ ಎಕ್ಸಾಮಿನೇಷನ್‌ಗೆ ಕಳುಹಿಸಿಕೊಟ್ಟಿದ್ದೀರಿ. ಅವರು ಏನಾದರೂ ನತ್ತು ಹೋಗಿದ್ದರೆ ವಿಸಾರ ಕಳುಹಿಸಿಕೊಡುತಿದ್ದೀರಿ. ಅದನ್ನು ಕಳುಹಿಸಿಕೊಟ್ಟು ನಾವು ಸುಮ್ಮನೆ ಕುಳಿತುಕೊಳ್ಳಬೇಕಾಗಿತ್ತು. This is a very serious matter and we have been hearing such cases very often. ಇಲ್ಲಿಯವರೆಗೆ ಇದಕ್ಕೆ ಸಂಬಂಧಪಟ್ಟ ಜನರನ್ನು ಏನಾದರೂ ದಸ್ತಗಿರಿ ಮಾಡಿದ್ದಾರೆಯೇ? ಹಾಗೆ ಮಾಡಿದ್ದರೆ ಎಷ್ಟು ಜನರನ್ನು ದಸ್ತಗಿರಿ ಮಾಡಿದ್ದಾರೆ? ಪುಡ್‌ಗ್ಯೆನ್ಸ್ ಆಗಲಿ, ಕಾಳುಗಳಾಗಲಿ ಎಲ್ಲಿಂದ ತಂದಿದ್ದರು? ಇದರ ಬಗ್ಗೆ ಏನಾದರೂ ವಿಚಾರಣೆ ಮಾಡಿದ್ದೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗ ಮಾನ್ಯ ಸದಸ್ಯರು ಕೇಳುವ ವಿವರ ನನ್ನ ಹತ್ತಿರ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ರಿಪೋರ್ಟ್‌ಮೆಂಟ್ ಮಾಡಿ ಮಕ್ಕಳನ್ನು ಗುಣಪಡಿಸಿ ಕಳುಹಿಸಿಕೊಟ್ಟಿದ್ದಾರೆ. ಕೆಮಿಕರ್ ಎಕ್ಸಾಮಿನೇಷನ್‌ಗೆ ಕಳುಹಿಸಿದ್ದಾರೆ. ಆದರ ರಿಸಲ್ಟ್ ಬಂದಮೇಲೆ ವಿಚಾರ ಮಾಡೋಣ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಸೇವಾಶ್ರಮಗಳಲ್ಲಿ ಸಾಮಾನ್ಯವಾಗಿ ಮಕ್ಕಳಿಗೆ ಒಳ್ಳೆಯ ಆಹಾರವನ್ನು ಏನೂ ಒದಗಿಸುತಿಲ್ಲ. ಚೆಂಡರು ಕರೆದು ಚೀಪ್‌ರೇಟ್‌ನಲ್ಲಿ ಸಿಕ್ಕ ತಕ್ಕಂಥ ಆಹಾರವನ್ನು ತಂದು ಮಕ್ಕಳಿಗೆ ಹಾಕುತ್ತಾರೆ. ಈ ರೀತಿ ಅನಾನುಕೂಲ ಆಗಿರುವ ಕಾರಣ ಇಂಥಾದ್ದನ್ನು ಚೆಕ್ಕಿಂಗ್ ಮಾಡುವ ವ್ಯವಸ್ಥೆಯನ್ನು ಏನಾದರೂ ಮಾಡಿದ್ದೀರಾ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಡೈರೆಕ್ಟ್ ಆಗಿ ನಮ್ಮ ಇಲಾಖೆಗೆ ಇದು ಸಂಬಂಧಪಟ್ಟಿಲ್ಲ, ಆಶ್ರಮದ ಅಥಾರಿಟೀಸ್ ಇದರ ಬಗ್ಗೆ ಹೆಚ್ಚು ಲಕ್ಷ್ಯ ಕೊಡಬೇಕು, ಇದರ ಬಗ್ಗೆ ನಮ್ಮ ಗಮನಕ್ಕೆ ಬಂದಾಗ ಅಥವಾ ಆರೋಗ್ಯ ಇಲಾಖೆಯ ಗಮನಕ್ಕೆ ಬಂದಾಗ ಅದನ್ನು ವಿಚಾರ ಮಾಡಬೇಕಾಗುತ್ತದೆ.

*(ii) re : alleged murder of Sri Karigappa of Bisalehalli, Tiptur Taluk.*

**Sri M. B. RAMASWAMY** (Anekal).—I call the attention of the Hon. Chief Minister to the murder of Sri Kariyappa of Bisalehalli, Tiptur Taluk.

**Sri D. DEVARAJ URS** (Chief Minister).—I state as follows :—

On 15th March 1974 at about 12-00 hours one Kalavaid Parameswaraiah of Bisalehalli village appeared at Nonavinakere Police Station and presented a report of Sri B. Channegowda, Patel of Bisalehalli. The report was to the effect that on the night of 14th March 1974 Kariyappa, a Harijan of Bisalehally died and the dead body was seen on the road in the Harijan Colony, on the early morning of 15th March 1974. A case was registered in U. D. R. No. 3/74 at Nonavinakere Police Station. Inquest proceedings were conducted over the dead body u/s 174 Cr. P. C. in the presence of Panchayatdars. There were no injuries of any kind on the dead body. During the course of inquest, the following persons were examined and their statements recorded. Nobody suspected any foul play at that time regarding his death.

1. Thayamma W/o. Deceased Kariyappa.
2. Kadaraiah S/o. Narasaiah (Father of the deceased).
3. Narasimhaiah, (Elder brother of the deceased).
4. Narayanaiah (Elder brother of the deceased).

(SRI D. DEVARAJ URS)

5. Narasaiah (Elder brother of the deceased).
6. Siddaiah, (Cousin brother of the deceased).
7. Venkatappa, S/o. Ramaiah, Nagaranavile, Channarayapatna Taluk.
8. Ramaiah S/o. Narayanappa, Nagaranavile, Channarayapatna Taluk.

The dead body was sent to Nonavinakere Hospital for Post-Mortem Examination. After the Post Mortem Examination the opinion of the Medical Officer was reserved, as the Chemical Examiner's report was still awaited, butlater on the chemical Examin's report was also obtained and it revealed the presence of organo-phosperous poison in one of the bottles containing the stomach contents. No cognizable poison was detected in the contents of other bottles. Investigation revealed that the death was due to poisoning, either suicidal, or accidental and not homicidal, as no one had any grudge against the deceased. Siddaiah, the cousin of the dec ased, who is suspected by Thayamma, has no motive to murder him at all : in fact, the deceased and Siddaiah were on friendly terms. Her suspicion seems to be an afterthought due to the instigation of local touts. It does not appear to be a case of murder and no foul play is suspected in his death. However the matter has been referred to the C.I.D. for a further probe by the Corps of Detectives.

Smt. Thayamma and one Appajappa observed hunger striks for one day in front of the office of the Circle Inspector of Police, Tiptur from 14-00 hours on 10th August 1974 till 14-00 hours on 11th August 1974, for want of justice in this case.

ಶ್ರೀ ಎಂ. ಬಿ ರಾಮಸ್ವಾಮಿ--ಮಾನ್ಯ ಅಧ್ಯಕ್ಷರೆ, ಈಗ ಯಾರು ಸತ್ತಿದ್ದಾನೆ, ಆತ ಒಬ್ಬ ಟಾಡಿ ಕಂಟ್ರಾಕ್ಟರ್ ಜೊತೆಯಲ್ಲಿ ಕೆಲಸ ಮಾಡಿಕೊಂಡಿದ್ದ. ಅತನಿಗೆ ನೆರವಾಗಿದ್ದುಕೊಂಡು ಎಲ್ಲಾ ಕೆಲಸ ಕಾರ್ಯಗಳನ್ನು ನೋಡಿಕೊಂಡು ವ್ಯಾಪಾರ ಎಲ್ಲಾ ಆದಮೇಲೆ ಅವನು ಸಾಯಂಕಾಲ ಹಣವನ್ನು ಪಾವತಿ ಮಾಡುವ ಅಭ್ಯಾಸ ಇತ್ತು. ಆದರೆ ಬರುಬರುತ್ತಾ ಬಿಸಿನೆಸ್ ಜಾಸ್ತಿ ಆಗಿ ಹಣ ಕೂಡ ಬರುವುದು ಜಾಸ್ತಿ ಆಯಿತು. ಹೇಗಾದರೂ ಮಾಡಿ ಅವನನ್ನು ಈ ಕೆಲಸದಿಂದ ತಪ್ಪಿಸಿ ಬೇರೆ ಯಾರಿಗಾದರೂ ಕೊಡಬೇಕೆಂಬ ದುರುದ್ದೇಶದಿಂದ ಸಾಯಂಕಾಲ ಅತನನ್ನು ತೋಟಕ್ಕೆ ಕರೆದುಕೊಂಡು ಹೋಗಿ ಪಾಯಿಸನ್ ಕುಡಿಸಿ ಅತನು ಸತ್ತಮೇಲೆ ಡಡ್ ಬಾಡಿಯನ್ನು ತೆಗೆದುಕೊಂಡು ಬಂದು ಹೊರಗಡೆ ಹಾಕಿದ್ದಾರೆ. ಇದರ ಬಗ್ಗೆ ರಿಪೋರ್ಟ್ ಇದೆ ಬೇಕಾದರೆ ಕಳುಹಿಸಿಕೊಡುತ್ತೇನೆ. ಬೆಸಿನೇರಳೆಯಲ್ಲಿರತಕ್ಕ ಹರಿಜನರು, ಬಡವರು, ತಿಳುವಳಿಕೆ ಇಲ್ಲದ ಜನ ಅವರನ್ನು ಹೆದರಿಸಿ ಅವರಿಂದ ಸ್ಟ್ಯಾಂಪ್‌ಮೆಂಟ್ ತೆಗೆದುಕೊಂಡಿದ್ದಾರೆ. ಈಗ ಅದನ್ನು ಸಿ.ಐ.ಡಿ.ಗೆ ರೆಫರ್ ಮಾಡಿರುವುದರಿಂದ ನಮಗೆ ನ್ಯಾಯ ದೊರಕುತ್ತದೆ ಅಂದುಕೊಂಡಿದ್ದೇವೆ. ಅವನ ಮೇಲೆ ಗ್ರಡ್ಜ್ ಯಾರಿಗೂ ಇಲ್ಲವೆಂದು ಹೇಳುತ್ತಾರೆ. ಗ್ರಡ್ಜ್ ಇಲ್ಲದೇ ಹೋದ ಪಕ್ಷದಲ್ಲಿ ಅವನಿಗೆ ಪಾಯಿಸನ್ ಕುಡಿಸುವಂತಹ ಅವಶ್ಯಕತೆ ಏನಿತ್ತು ? ಆತನನ್ನು ಊರು ಬಿಡಿಸಬೇಕೆಂಬ ಉದ್ದೇಶದಿಂದ ಆತನ ಹತ್ತಿರ ಇದ್ದ 5 ಎಕರೆ ಜಮೀನನ್ನು 100 ರೂಪಾಯಿಗೆ ಬರೆಸಿಕೊಂಡಿದ್ದಾರೆ. ಅವನು ಅಂಗಡಿ ವ್ಯವಹಾರ ಮಾಡುತ್ತಿದ್ದ. ಅವನನ್ನು ಬಿಡಿಸಬೇಕೆಂಬ ಗ್ರಡ್ಜ್ ಇಟ್ಟುಕೊಂಡು ಸಾಯಿಸಿ ಹೊರಗಡೆ ಹಾಕಿದ್ದಾರೆ. ಸಿ.ಐ.ಡಿ.ಗೆ ಮತ್ತೊಮ್ಮೆ ಆದೇಶ ಕೊಟ್ಟು ಇನ್‌ವೆಸ್ಟಿಗೇಷನ್‌ನ್ನು ಸರಿಯಾದ ರೀತಿಯಲ್ಲಿ ಮಾಡಿಸಬೇಕು. ತಾವು it is either suicidal or accidental but not homicidal ಎಂದು ಹೇಳುತ್ತೀರಿ. ಅವನನ್ನು ಸಾಯಿಸಿ ತಂದು ಹಾಕಿದ್ದಾರೆ.

ಪರಿಪೂರ್ಣವಾಗಿ ಮಾಹಿತಿ ತರಿಸಿಕೊಂಡು ಏನು ಅನ್ಯಾಯವಾಗಿದೆ, ಯಾರ ಮುಖಾಂತರ ಇದು ಆಗಿದೆ ಎಂಬುದನ್ನು ನೋಡಿ ಅವರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮರ್ಡರ್ ಆಗಿರತಕ್ಕದ್ದು ಖಚಿತ. ಇದಕ್ಕೆ ಅಂಕೆ ಅಂಶ ಇದೆ. ವಿಧಾನ ಸೌಧದ ಮುಂದೆ ಚಳುವಳಿ ಹೂಡುತ್ತೇವೆ, ಸತ್ಯಾಗ್ರಹ ಮಾಡುತ್ತೇವೆ ಎಂದು 8 ಜನ ಬಂದಿದ್ದರು. ಆಗ ನಾನು ಅವರಿಗೆ ಸಮಾಧಾನ ಮಾಡಿ ಕಳುಹಿಸಿದ್ದೇನೆ. ತಾವು ಇದನ್ನು ಸಿ.ಐ.ಡಿ.ಗೆ ರೆಫರ್ ಮಾಡುವುದು ಬಹಳ ಉತ್ತಮವಾದುದು. ಲೋಕಲ್ ಪೊಲೀಸರು ಪೆಕ್ಷನ್ 134ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿಕೊಂಡು ಕ್ರಮ ಜರಗಿಸುವುದಕ್ಕೆ ತಡ ಮಾಡಿದ್ದಾರೆ. ಲೋಕಲ್ ಪೋಲೀಸರಿಂದ ಅನ್ಯಾಯವಾಗಿದೆ. ಆದುದರಿಂದ ಇದನ್ನು ಸಿ.ಐ.ಡಿ. ಸೆಲ್‌ಗೆ ರೆಫರ್ ಮಾಡಿ ಉತ್ತಮವಾದ ಒಂದು ರಿಪೋರ್ಟ್‌ನ್ನು ತರಿಸಿ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಈ ಕೇಸ್‌ನಲ್ಲಿ ಅವರ ಸಂಬಂಧಿಗಳು 7 ಜನರಿದ್ದಾರೆ.

ಶ್ರೀ ಕೆ. ಸಿದ್ದಯ್ಯ.—ಪೋಸ್ಟ್ ಮಾರ್ಟಂನ್ನು ಯಾವ ತಾರೀಖಿನಲ್ಲಿ ಮಾಡಿದ್ದು ಎಂಬುದಕ್ಕೆ ತಾರೀಖು ಇಲ್ಲ.

ಶ್ರೀ ಡಿ. ದೇವರಾಜ ಅರಸ್.—15ನೇ ತಾರೀಖು ಎಂದು ನಾನು ಆಗಲೇ ಹೇಳಿದ್ದೇನಲ್ಲಾ.

2.00 P.M.

ಶ್ರೀ ಕೆ. ಸಿದ್ದಯ್ಯ.—ಯಾವ ತಾರೀಖು ಇನ್‌ಕ್ವೆಸ್ಟ್ ಆಯಿತು, ಯಾವ ತಾರೀಖು ಪೋಸ್ಟ್ ಮಾರ್ಟಮ್ ಆಯಿತು, ಯಾವ ತಾರೀಖು ಕೇಸ್ ರಿಜಿಸ್ಟ್ರೇಷನ್ ಆಯಿತು ?

ಶ್ರೀ ಡಿ. ದೇವರಾಜ್ ಅರಸ್.—ಇನ್‌ಕ್ವೆಸ್ಟ್ 15-3-1974, ಪೋಸ್ಟ್ ಮಾರ್ಟಮ 16-3-1974, ರಿಜಿಸ್ಟ್ರೇಷನ್ ಆಫ್ ದಿ ಕೇಸ್ ಆಪೊತಿನ ದಿವಸವೇ ಮಾಡಿದ್ದಾರೆ. 14-3-1974 ಕರಿಯಪ್ಪ ನತ್ತದ್ದು, ಎಂದು 15ನೇ ತಾರೀಖು ಪಟೇಲರು ಕಳುಹಿಸಿಕೊಟ್ಟಿದ್ದಾರೆ. ಅದನ್ನು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇಲ್ಲಿ ಏನಾಗಿದೆ ಪಂಚನಾಮೆ ಮಾಡುವಾಗ ತಾಯಮ್ಮ ಇದ್ದಾರೆ Kadaraiah S/o Narasaiah (Father of the deceased),Narasimaiah. (Elder brother of the deceased), Narayanaiah (Elder brother of the deceased) Narasaiah (Elder brother of the deceased), Siddaiah (Cousin brother of the deceased), ಹೊರಗಡೆಯವರು Venkatappa S/o Ramaiah, Nagaranavile, Channarayapatna Taluk, Ramaiah S/o Narayanappa, Nagaranavile, Channarayapatna Taluk, ಮತ್ತು ಇನ್ನಿಬ್ಬರು ಬೇರೆಯವರು ಇದ್ದಾರೆ ಎಂದು ಇಟ್ಟುಕೊಳ್ಳೋಣ. 5—6 ಜನ ಅವರ ಸಂಬಂಧಿಗಳು ಪಂಚನಾಮೆ ಮಾಡುವಾಗ ಇದ್ದರು ಎಂದು ಆಗಲೆ ಹೇಳಿದ್ದೇನೆ. ನಮ್ಮ ರಿಪೋರ್ಟ್ ಪ್ರಕಾರ ಪೋಲೀಸ್ ಮುಂದೆ ಹೇಳಿಲ್ಲ, ಸಬ್‌ಸಿಕ್ವೆಂಟ್ ಹೇಳಿದ್ದಾರೆ ಅಂದರೆ, ಇಲ್ಲ ಅದನ್ನು ವಿಶೇಷವಾಗಿ ನಮ್ಮ ಹತ್ತಿರ ಹೇಳುವುದಕ್ಕಿಂತ ತಾವುಗಳು ಈ ವಿಶೇಷ ಮಾಹಿತಿಯನ್ನು ನಾವು ಯಾರನ್ನು ಸಿ.ಐ.ಡಿ. ಇನ್‌ವೆಸ್ಟಿಗೇಷನ್‌ಗೆ ಹಾಕಿದ್ದೇವೋ ಅವರಿಗೆ ಕಳುಹಿಸಿಕೊಡಿ ಎಂದು ಹೇಳುತ್ತೇನೆ. ಸಿ.ಐ.ಡಿ. ಅವರಿಗೆ ನಿರ್ಧಾರಣ್ಣವಾಗಿ ನೋಡಿ ಎಂದು ಹೇಳಿದ್ದೇನೆ.

*(iii) re*: **Advance increments to Government Servants passing Typewriting and Shorthard in Kannada Language**

Sri T. R. SHAMANNA.—Madem Speaker, I call the attention of the Minister for Finance and Information to the question of granting advance increments to the Government servants who have passed Typewriting and Short-hand in Kannada Language.